ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಸೋಮವಾರ, ದಿನಾಂಕ : 01 ನೇ ಫೆಬ್ರುವರಿ, 2021

ಉಪವಲಯ ಮತ್ತು ವಲಯ ಅರಣ್ಯಾಧಿಕಾರಿಗಳ ಜೇಷ್ಠತೆ ಪಟ್ಟಿಯ ನ್ಯೂನ್ಯತೆ ಸರಿಪಡಿಸುವ ಬಗ್ಗೆ

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) -

16 (331) ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕøತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕಳೆದ ಅಧಿವೇಶನದಲ್ಲಿ ಮಾನ್ಯ ಅರಣ್ಯ ಸಚಿವರು ಕೆಲವು ವೃತ್ತಗಳಲ್ಲಿ ಸಮಿತಿಯ ವರದಿಯನ್ನು ವೃತ್ತದ ಮುಖ್ಯಸ್ಥರು ಪಾಲನೆ ಮಾಡದಿರುವ ಬಗ್ಗೆ ತಿಳಿಸಿರುವುದು ನಿಜವೇ ; ಪಾಲನೆ ಮಾಡದಿರುವವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಸರ್ಕಾರದ ಪತ್ರ ಸಂಖ್ಯೆ:ಅಪಜೀ:17ಆಇವಿ:2019, ದಿನಾಂಕ:05.07.2019ರಲ್ಲಿ 2017ರ ನಿಯಮಗಳಂತೆ ಜೇಷ್ಠತಾ ಪಟ್ಟಿಯನ್ನು ಮರು ಪ್ರಕಟಿಸುವಾಗ ತಪ್ಪು/ಅನುಷ್ಠಾನದಲ್ಲಿ ವಿಫಲತೆ ಕಂಡು ಬಂದಲ್ಲಿ, ಸಿಐಡಿ ತನಿಖೆ ಜರುಗಿಸಲಾಗುವುದೆಂದು ತಿಳಿಸಿರುವುದು ನಿಜವೇ ; ಹಾಗಿದ್ದಲ್ಲಿ, ಹಲವು ವೃತ್ತಗಳಲ್ಲಿ ಅಧಿಕಾರಿಗಳು ಲೋಪವೆಸಗಿರುವುದು ಸರ್ಕಾರದ ಗಮನಕ್ಕೆ ಬಂದರೂ ಸಹ ಸಿಐಡಿ ತನಿಖೆ ಜರುಗಿಸದಿರಲು ಕಾರಣವೇನು ; ತನಿಖೆ ಜರುಗಿಸಲು ಕ್ರಮ ವಹಿಸಲಾಗುವುದೇ ;

(ಇ) ಉಪ ವಲಯ ಅಧಿಕಾರಿ ಹುದ್ದೆಯ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಪ್ರಮೇಯ ಉದ್ಭವಿಸುವುದಿಲ್ಲವೆಂದು ಪರಿಷತ್ತಿಗೆ ಮಾಹಿತಿ ನೀಡಿರುವ ಅಧಿಕಾರಿಯ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ;

(ಈ) ಪೋಷಕ ವೃಂದದ ಜೇಷ್ಠತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸಿ ಪ್ರಕಟಿಸುವ ಪೂರ್ವದಲ್ಲಿಯೇ ಅಂತಿಮಗೊಳಿಸಿರುವ ವಲಯ ಅರಣ್ಯ ಅಧಿಕಾರಿ ಜೇಷ್ಠತಾ ಪಟ್ಟಿಯನ್ನು ಸರ್ಕಾರ ರದ್ದುಪಡಿಸಿ ಹೊಸದಾಗಿ ಪ್ರಕಟಿಸುವುದೇ; ಹಾಗಿದ್ದಲ್ಲಿ, ಕೈಬಿಟ್ಟಿರುವ ಅರ್ಹ ನೌಕರರನ್ನು ಜೇಷ್ಠತಾ ಪಟ್ಟಿಗೆ ಸೇರಿಸಲು ಕ್ರಮ ಜರುಗಿಸಲಾಗುವುದೇ ?